ಮಾಡಲು ಎಷ್ಟು ಖರ್ಚು ಬರುತ್ತದೋ, ಮುನಿಸಿಪಾಲಿಟಿ ವಿಧಿಸುವ ತೆರಿಗೆಯಲ್ಲೇ ಸೇರಿರುತ್ತದೋ ಏನೋ.

* * *

ವೆಸ್ಟ್‌ಮಿನ್‌ಸ್ಟರ್ ಅಬೆ ನೋಡಬೇಕು ಅನ್ನಿಸಿತ್ತು, ಬಹಳ ಕಾಲದಿಂದ. ವರ್ಡ್ಸ್‌ವರ್ತ್ ಕವಿ ಇದ್ದನಲ್ಲಾ ಅವನು ವೆಸ್ಟ್‌ಮಿನ್‌ಸ್ಟರ್ ಬ್ರಿಜ್ ಕುರಿತು 1802 ರಲ್ಲಿ ಪದ್ಯ ಓದಿದ್ದು, ಪಾಠ ಮಾಡಿದ್ದು ಇನ್ನೂ ನೆನಪಲ್ಲಿ ಉಳಿದಿದ್ದವು. ಅದರ ಕೆಲವು ಸಾಲು ನಗರ ಮಧ್ಯದಲ್ಲೂ ಕವಿ ಕಾಣುವ ನಿಸರ್ಗದ ಚೆಲುವಿನ ವರ್ಣನೆ ಅನಿಸುತಿತ್ತು.

ಈ ನಗರವೀಗ ತೊಟ್ಟಿದೆ ಮುಂಜಾವದ
ಚೆಲುವನು ಉಡುಪಿನ ಹಾಗೆ;
ಜಹಜು, ಗೋಪುರ, ಗುಮ್ಮಟ, ರಂಗಮಂದಿರ,
ದೇಗುಲಗಳೆಲ್ಲ
ಬಯಲಿಗೆ, ಆಗಸಕೆ ಮೈ ತೆರೆದು ನಿಂತಿವೆ ನಿಶ್ಚಲ,
ನಿಶ್ಶಬ್ದ, ಬತ್ತಲೆ
ಹೊಗೆಯಿರದ ಸ್ವಚ್ಛಗಾಳಿಯಲಿ ಮಿರಮಿರ
ಮಿರುಗಿವೆ

ಆಹಾ, ಕವಿ ಕಂಡ ನಗರದ ಸೂರ್ಯೋದಯದ ಆ ತಾಣ, ಇಂಗ್ಲಿಷ್ ಸಾಹಿತ್ಯ ಓದುವಾಗ ಮತ್ತೆ ಮತ್ತೆ ಎದುರಾಗುವ ಥೇಮ್ಸ್ ನದಿ ಹೇಗಿವೆ ನೋಡಬೇಕು ಅನಿಸಿತ್ತು. ಆ ಸಾಲುಗಳ ಜೊತೆಯಲ್ಲೇ ಪುತಿನ ಬರೆದ ಯೌದುಗಿರಿಯ ಮೌನ ವಿಕಾಸದಲ್ಲಿ ಬರುವ ಈ ಮಾತೂ ಮನಸಿಗೆ ಬರುತಿತ್ತು:

ಮೂಡಣ ಕಣಿವೆಯ ಹಿಮದವಕುಂಠನ
ರವಿಕರ ಸ್ಪರ್ಶಕೆ ಜಾರುತಿದೆ
ನಾಡದೊ ಹಿಗ್ಗುತ ನಾಚುತ ಮೆಲ್ಲನೆ
ಮೈಸಿರಿಯನು ತಾ ತೋರುತಿದೆ

ನಗರದ ಅಕ್ಷರಶಃ ಜೀವನಾಡಿಯಾಗಿ ಊರಿನ ನಟ್ಟ ನಡುವೆ ಪ್ರಾಚೀನ ವೆಸ್ಟ್‌ಮಿನ್‌ಸ್ಟರ್ ಚರ್ಚ್‌ನ ಪಕ್ಕದಲ್ಲೇ ಹರಿಯುವ ಥೇಮ್ಸ್ ಹೇಗಿರಬಹುದು ಅನ್ನುವ ಕಲ್ಪನೆ ಇತ್ತೋ ಅದು ಪೂರಾ ಬದಲಾಗಿ ಹೋಯಿತು-ಬಹಳ ಕಾಲದಿಂದ ಏನೇನೋ ತುಂಬಿಟ್ಟದ್ದ ಚೀಲವನ್ನು ಒದರಿ, ಕೊಡವಿ, ಚೀಲದ ಒಳಭಾಗವನ್ನು ಹೊರಕ್ಕೆಳೆದು ಬಿಸಿಲಿಗೆ ಒಣಹಾಕಿದ ಹಾಗೆ.

ಕವಿ ಕಂಡ ಚೆಲುವು ಆಗ ಇತ್ತೋ ಏನೋ, ಕಣ್ಣೆದುರು ಇದ್ದದ್ದು ಮಾತ್ರ ಮರಣ ವೈಭವ ಅಥವಾ ಮರಣದ ವ್ಯರ್ಥ ವೈಭವದ ವ್ಯಾಪಾರ ಅನ್ನಿಸಿಬಿಟ್ಟಿತ್ತು. ಇಡೀ ನಾಡು ಹೆಣ್ಣಾಗಿ, ಸೂರ್ಯನ ಕಿರಣ ಪ್ರೇಮಿಯ ಕೈಯಾಗಿ, ಹೆಣ್ಣಿನ ಮುಖವನು ಮಾರೆಮಾಡಿದ್ದ ಸೆರಗು ಜಾರಿ, ನಾಡೆಂಬ ಹೆಣ್ಣು ಹಿಗ್ಗುತ್ತ ಆದರೂ ನಾಚುತ್ತ ಮೆಲ್ಲ ಮೆಲ್ಲನೆ ಮೈಸಿರಿಯನ್ನು ತೋರುವ ಚಿತ್ರ ಹೆಚ್ಚು ಭಾವ ತುಂಬಿದ್ದು, ಕನ್ನಡಕ್ಕೆ ಸಹಜ ಅನಿಸಿತ್ತು. ಈಗ ಯಾವ ಯದುಗಿರಿಯಲ್ಲೂ ನಾಚುವ, ಹಿಗ್ಗುವ ಮೆಲ್ಲ ಮೆಲ್ಲನೆ ಮೈಸಿರಿಯ ತೋರುವ ಹೆಣ್ಣಿನ ಕಲ್ಪನೆ ಬರಲು ಸಾಧ್ಯವೇ ಇಲ್ಲ. ಅತ್ಯಾಚಾರಕ್ಕೆ ಒಳಗಾದ ಕಾಡು, ಬೆಟ್ಟದ ಬಂಡೆ, ಯಂತ್ರಗಳು ಕೊರೆದು ಮಾಡಿದ ಗಾಯದಂಥ ಆಳ ಗುಂಡಿಗಳೇ ಬೆಳಕು ಹರಿವ ಕ್ಷಣದಲ್ಲಿ ಕಾಣುತ್ತವೆ. ಚೆಲುವು ಮರಣಿಸಿದೆ, ಕಲ್ಪನೆಯಲ್ಲಿ ಮಾತ್ರ ಚೆಲುವಾಗಿ ಕಾಣುತ್ತದೆ.

ಯೂಸ್ಟನ್ ಸ್ಟೇಷನ್ನಿನಲ್ಲಿ ಬೆಳಗಿನ ಎಂಟು ಗಂಟೆಯ ಹೊತ್ತಿಗೆ ರೈಲಿಳಿದು ನಡೆದು ಹೋಗುತ್ತ ಹತ್ತು ಹದಿನೈದು ನಿಮಿಷದೊಳಗೆ ವೈಟ್ ಹಾಲ್‌ನಲ್ಲಿದ್ದೆವು. (ವೈಟ್ ಹಾಲ್- ಇಂಗ್ಲೆಂಡಿನ ಸರ್ಕಾರದ ಆಡಳಿತ ಕಚೇರಿಗಳಿರುವ ವಲಯ. ಬೆಂಗಳೂರಿನ ಅಂಬೇಡ್ಕರ್ ವೀಧಿಯ ಹಾಗೆ.) ಅಷ್ಟು ನಡೆಯವುದರೊಳಗೆ ಟ್ರಫಾಲ್ಗರ್, ನೆಲ್ಸನ್, ವೆಸ್ಟ್‌ಮಿನ್‌ಸ್ಟರ್, ಟವರ್ ಬ್ರಿಜ್, ಲಂಡನ್ ಟವರ್, ಇತ್ಯಾದಿ ಪ್ರಸಿದ್ಧಗೊಳಿಸಲ್ಪಟ್ಟ ಸ್ಥಾನಗಳಿಗೆ ಹೋಗುತ್ತೇವೆಂದು ಬೋರ್ಡು ಹೊತ್ತ ಸಿಟಿಬಸ್ಸುಗಳು, ರಾಜ, ರಾಣಿಯರ ಮಂತ್ರಿ ಸೇನಾಪತಿಗಳ ಹೆಸರು ಹೊತ್ತ ಕಟ್ಟಡಗಳ ಸಾಲು, ಇಂಡಿಯವನ್ನು ಆಳುತ್ತಿದ್ದ ಅವಧಿಯ ಇಂಗ್ಲೆಂಡ್ ಸರ್ಕಾರದ ದೊಡ್ಡ ಕಟ್ಟಡ ಇವೆಲ್ಲದರ ಹೆಸರು, ಹೆಸರು ಹೊತ್ತ ಈ ಹೊತ್ತಿನ ವಸ್ತುಗಳು ಎಲ್ಲ ಹದಿನೈದು ದಿನ ಕಳೆಯುವುದರೊಳಗೆ ಮರೆತು ಹೋಗಿವೆ. ಭಾನುವಾರದ ದಿನ, ಪ್ರವಾಸಿಗಳನ್ನು ಬಿಟ್ಟರೆ ಸ್ಥಳೀಯರು ಸುಧಾರಿಸಿಕೊಳ್ಳುವ, ವಾರಾಂತ್ಯದ ಮೋಜಿಗೆ ಇನ್ನೆಲ್ಲಿಗೋ ಹೋಗಿರುವ ದಿನ. ಭವ್ಯ, ಬೃಹತ್ ಕಟ್ಟಡಗಳೆಲ್ಲ ಖಾಲಿ ಇರುವಾಗ ಹೇಗೆ ಕಾಣುತ್ತವೋ ಹಾಗೆ ಕಾಣುತಿದ್ದವು ಆ ಎಲ್ಲ ಭವ್ಯ ಇಮಾರತು.

ನೆನಪು ಉಳಿದದ್ದು ಒಂದೇ: ಪಾರ್ಲಿಮೆಂಟ್ ಸ್ಟ್ರೀಟಿನಲ್ಲಿ ರಸ್ತೆಯ ನಡೂ ಮಧ್ಯೆ, ಉದ್ದುದ್ದವಾಗಿ ನಿಂತ ಕರಿಯ ಕಲ್ಲಿನ ಆಯತಾಕಾರದ ಸ್ಮಾರಕ, ಅದರ ಮೇಲೆ ನಾಲ್ಕೂ ದಿಕ್ಕುಗಳಲ್ಲಿ ಕೆತ್ತಿದ್ದ, ಶಿಲುಬೆ ಇರದಿದ್ದರೂ ಶಿಲುಬೆಗೇರಿದ ಹಾಗೆ ಕಾಣುತ್ತಿದ್ದ,